**ಸಾಕ್ಷಿಯನ್ನು ದಿನಾಂಕಃ 07-11-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

ಸಾಕ್ಷಿದಾರರ ಹೆಸರುಃ ಎಂ. ಬಸವರಾಜಪ್ಪ ಪಿಡಬ್ಲ್ಯೂ- 2

ತಂದೆಯ ಹೆಸರು ಮುದೇಗೌಡರ ಬಕ್ಕಪ್ಪ

ವಯಸ್ಸುಃ 75 ವರ್ಷ

ಉದ್ಯೋಗಃ ಪತ್ರ ಬರಹಗಾರರು

ವಾಸಃ ಹರಪನಹಳ್ಳಿ

**ಮುಖ್ಯವಿಚಾರಣೆ : ವಾದಿ ಪರ ಶ್ರೀ ವಿ.ಜಿ.ಪಿ. ವಕೀಲರವರಿಂದಃ**

ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು. ಸಾಕ್ಷಿಯು ನಿ.ಪಿ.6 ಮರಣ ಶಾಸನ ದಾಖಲೆಯನ್ನು ಪರಿಶೀಲಿಸಿ, ಅದನ್ನು ತಾನೇ ಬರೆದಿರುವುದಾಗಿ ನುಡಿದರು. ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದರು. ಸಾಕ್ಷಿಯು ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಮರಣ ಶಾಸನವನ್ನು ಬರೆದಿರುವ ಕುಸುಮ ರವರ ಸಹಿಯು ಸದರಿ ದಾಖಲೆಯ ಎಲ್ಲಾ ಪುಟಗಳಲ್ಲಿ ಇರುವುದು. ಸಾಕ್ಷಿಯು ಸದರಿ ಸಹಿಗಳನ್ನು ಗುರುತಿಸುವರು. ಸದರಿ ದಾಖಲೆಗೆ ಸಾಕ್ಷಿದಾರರಾಗಿ ಕಲ್ಲಪ್ಪ ಹಾಗೂ ನಾಗಪ್ಪ ರವರು ಸಹಿ ಮಾಡಿರುವರು. ಸಾಕ್ಷಿಯು ಸದರಿ ಸಹಿಗಳನ್ನು ಗುರುತಿಸುವರು. ಮರಣ ಶಾಸನವನ್ನು ದಿನಾಂಕ: 29-09-2014 ರಂದು ಕುಸುಮರವರು ತನ್ನ ತಂಗಿಯ ಗಂಡನಾದ ಮರುಳಸಿದ್ದಪ್ಪನಿಗೆ ಬರೆದುಕೊಟ್ಟರು. ನಿ.ಪಿ.6 ನ್ನು ತಯಾರು ಮಾಡುವ ಕಾಲಕ್ಕೆ ಕುಸುಮವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಮರ್ಥರಿದ್ದರು. ನಿ.ಪಿ.6 ರನ್ನು ರೆಯಲು ಕುಸಮರವರು ಮಾಹಿತಿ ನೀಡಿರುವರು. ನಿ.ಪಿ.6 ರಲ್ಲಿ ಬರೆದಿರುವ ಅಂಶಗಳು ಸರಿ ಇರುತ್ತವೆ.

**ಪಾಟೀ ಸವಾಲು: 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಆರ್.ಜಿ.ಪಿ. ವಕೀಲರಿಂದ:**

ನಾನು 2011 ನೇ ಸಾಲಿನಿಂದ ಪತ್ರಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ಪ್ರತಿದಿನ 2-3 ದಾಖಲೆಗಳನ್ನು ಬರೆಯುತ್ತೇನೆ. ನನ್ನ ಬಳಿ ದಾಖಲೆಗಳನ್ನು ಬರೆಸಿರುವ ಎಲ್ಲಾ ಪಕ್ಷಕಾರರ ವಿವರಗಳು ನನಗೆ ನೆನಪಿರುವುದಿಲ್ಲ. ಪತ್ರವನ್ನು ಬರೆಸಿರುವರು ಎಂದು ಹೇಳಲಾದ ವ್ಯಕ್ತಿಯು ನನಗೆ ಮುಂಚೆನಿಂದಲೂ ಪರಿಚಯವಿರುವುದಿಲ್ಲ. ನಿ.ಪಿ.6 ನ್ನು ತಯಾರು ಮಾಡುವ ಕಾಲಕ್ಕೆ ಕುಸಮರವರೊಂದಿಗೆ ಇಬ್ಬರು ಸಾಕ್ಷಿದಾರರು ಬಂದಿದ್ದರು. ದಾಖಲೆ ತಯಾಖುಉ ಮಾಥುವ ಕಾಲಕ್ಕೆ ತನ್ನ ತಂಗಿಯ ಗಂಡನ ಹೆಸರಿಗೆ ಮರಣ ಶಾಸನವನ್ನು ಬರೆಸುತ್ತಿದ್ದೇನೆ ಎಂದು ಕುಸುಮ ನನ್ನ ಬಳಿ ಹೇಳಿದ್ದರು. ದಾಖಲೆ ಮಾಡುವ ಕಾಲಕ್ಕೆ ಕುಸುಮ ರವರು ನನಗೆ ಆಕೆ ಬರೆದುಕೊಂಡು ಬಂದಿದ್ದ ಒಂದು ಕಾಗದವನ್ನು

ತೋರಿಸಿ, ಅದರ ಆಧಾರದ ಮೇಲೆ ಮರಣ ಶಾಸನವನ್ನು ಬರೆದಿರುತ್ತೇನೆ. ಸದರಿ ಕಾಗದವನ್ನು ಹೊರತುಪಡಿಸಿ ಪಹಣಿಯನ್ನು ನೀಡಿದ್ದರು. ಸದರಿ ಬರೆದುಕೊಂಡು ಬಂದ ಕಾಗದ ಮತ್ತು ಪಹಣೀಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ನೀಡಿರಲಿಲ್ಲ.

ಕುಸುಮ ರವರು ನನ್ನ ಮುಂದೆ ಸಹಿ ಮಾಡಿರುವ ಕಾರಣ ನಿ.ಪಿ.6 ದಾಖಲೆಯಲ್ಲಿರುವ ಸಹಿಗಳು ಕುಸುಮ ರವರ ಸಹಿಗಳೆಂದು ನಾನು ಹೇಳುತ್ತೇನೆ. ಕುಸುಮ ರವರು ಆರೋಗ್ಯವಾಗಿದ್ದರು ಎಂದು ಆಕೆಯ ಜೊತೆ ಮಾತನಾಡಿ ನಾನು ತಿಳಿದುಕೊಂಡಿದ್ದೆ. ಆಕೆಯ ಆರೋಗ್ಯಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ. ನಾನು ಆಕೆಯ ತಂಗಿಯ ಗಂಡನಾದ ಮರುಳ ಸಿದ್ದಪ್ಪನನ್ನು ನೋಡಿರಲಿಲ್ಲ, ಆತ ಆ ದಿನ ಬಂದಿರಲಿಲ್ಲ. ಕುಸುಮರವರು ಪತ್ರ ತಯಾರು ಮಾಡುವ ಕಾಲಕ್ಕೆ ಆಸ್ತಿಯ ವಿವರಗಳನ್ನು ಮತ್ತು ಹೆಸರುಗಳನ್ನು ಮಾತ್ರ ಹೇಳಿದರು. ಸಾಮಾನ್ಯವಾಗಿ ಆಸ್ತಿ ವಿವರಗಳನ್ನು ಹಾಗೂ ಪಕ್ಷಕಾರರ ಹೆಸರುಗಳನ್ನು ಪಡೆದು ಮರಣ ಶಾಸನದಲ್ಲಿ ಬರಬೇಕಾದ ಇತರೆ ವಿಚಾರಗಳನ್ನು ಪತ್ರಬರಹಗಾರರಾದ ನಾವು ಬರೆಯುತ್ತೇವೆ ಎಂದರೆ ಸರಿ. ನಿ.ಪಿ.6 ದಾಖಲೆಯನ್ನು ನೋಡಿ ಸಾಕ್ಷಿದಾರರು ಸಹಿ ಮಾಡಿದ್ದರು ಎಂದು ಹೇಳುತ್ತಿದ್ದೇನೆ.

ಮರುಳಸಿದ್ದಪ್ಪ ಇವರು ಬೆನಕನಹಳ್ಳಿಯವರು ಎಂದರೆ ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲು: 3 ಮತ್ತು 4 ನೇ ಪ್ರತಿವಾದಿ ಪರ ವಕೀಲರ ಪರವಾಗಿ:</u>**

3 ಮತ್ತು 4 ನೇ ಪ್ರತಿವಾದಿ ಪರ ವಕೀಲು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಪ್ರಾರ್ಥಿಸಿದ್ದರಿಂದ ಅಳವಡಿಸಿಕೊಳ್ಳಲಾಯಿತು.

**<u>ಮರುವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

07-11-2024

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ